ಸಾಕ್ಷಿಯನ್ನು ದಿ: 23.01.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**<u>ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-</u>**

1. ನನ್ನ ತಂದೆ 2018 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾತ 2000 ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾತನಿಗೆ ಇಬ್ಬರು ಮಕ್ಕಳು ಅವರೆಂದರೆ ಶಿವಲಿಂಗಯ್ಯ ಮತ್ತು ನನ್ನ ತಂದೆ ನಾಗರಾಜು. ನನ್ನ ತಂದೆ ಅನಾರೋಗ್ಯದಿಂದ ಮರಣ ಹೊಂದಿರುತ್ತಾರೆ. ನನ್ನ ತಂದೆಗೆ ಅನಾರೋಗ್ಯ ಇದ್ದ ಕುರಿತು ದಾಖಲಾತಿಗಳನ್ನು ಹಾಜರು ಪಡಿಸಿಲ್ಲ. ನನ್ನ ತಂದೆ ಮನೆಯಲ್ಲೇ ಮರಣ ಹೊಂದಿರುತ್ತಾರೆ. ನನ್ನ ತಂದೆಗೆ ಕುಡಿತದ ಚಟ ಇತ್ತು ಎಂದು ಸೃಷ್ಠಿ ಮಾಡಿ ಹೇಳಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆಗೆ ನಾನು, 2 ನೇ ವಾದಿ ಹಾಗೂ ಪ್ರತಿವಾದಿ 2 ಮತ್ತು 3 ರವರು ಮಕ್ಕಳಿರುತ್ತೇವೆ. 1 ನೇ ಪ್ರತಿವಾದಿ ನನ್ನ ತಾಯಿ. ನಾನು ಡಿ.ಎಡ್‌ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು 2007 ರಲ್ಲಿ ಡಿ.ಎಡ್ ನ್ನು ಭಗವಾನ್ ಬುದ್ದ ಕಾಲೇಜಿನಲ್ಲಿ ಮಾಡಿರುತ್ತೇನೆ. ನಾನು ಕೆಂಪಯ್ಯನದೊಡ್ಡಿ ಗ್ರಾಮದಿಂದ ಬಸ್ ನಲ್ಲಿ ಓದಲು ಮಳವಳ್ಳಿಗೆ ಬರುತ್ತಿದ್ದೆ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನನಗೆ 2012 ರಲ್ಲಿ ಮದುವೆಯಾಗಿರುತ್ತದೆ. ನನ್ನ ಮದುವೆ ನನ್ನ ಗಂಡನ ಮನೆ ಆನೇಕಲ್ ನಲ್ಲಿ ಮಾಡಿರುತ್ತಾರೆ. ನಾನು ಮದುವೆಯಾದಗಿನಿಂದ ನನ್ನ ಗಂಡನ ಮನೆಯಲ್ಲೇ ಇದ್ದೇನೆ. ನನ್ನ ಗಂಡನದು ಹೊಸಸಂಬಂಧ. ನನ್ನ ಮದುವೆ ಲಕ್ಷ್ಮಿವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ನನ್ನ ಮದುವೆ ಆಮಂತ್ರಣ ಪತ್ರಿಕೆ ಹಾಜರು ಪಡಿಸಿಲ್ಲ. ನನ್ನ ತಂದೆ ನನ್ನ ಮದುವೆಯನ್ನು ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಾನು ಆನೇಕಲ್ ನಲ್ಲಿ ಮದುವೆಯಾಗಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಮದುವೆಯಾದಾಗ 24 ವರ್ಷ ವಯಸ್ಸಾಗಿತ್ತು. 2 ನೇ ವಾದಿಗೆ 2017 ರಲ್ಲಿ ಮದುವೆಯಾಗಿರುತ್ತದೆ. ನನ್ನ ತಂದೆಗೆ ಯಾವ್ಯಾವ ಆಸ್ತಿಗಳು ವಿಭಾಗದಲ್ಲಿ ಬಂದಿದ್ದವು ಗೊತ್ತಿಲ್ಲ.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

OS 265 of 2020 – Cross of PW.1

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ